# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ದೂರವಾಣಿ: 0816-2254546, 0816-2255596, 0816-2255597 ಫ್ಯಾಕ್ಸ್: 0816-2270719

ಸಂಖ್ಯೆ:ಸಾ.ಅ.ವಿ:ವಿವಿಕಾತು:2019-20/ 5065 ದಿನಾಂಕ: 20.03.2020

## ದರಪಟ್ಟಿ ಆಹ್ವಾನ

ವಿಷಯ: ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಮಹಿಳಾ ವಿಶ್ರಾಂತಿ ಕೊಠಡಿಗೆ ಅಗತ್ಯ ಪೀಠೋಪಕರಣಗಳನ್ನು ಸರಬರಾಜು ಮಾಡಲು ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.03.2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಮಹಿಳಾ ವಿಶ್ರಾಂತಿ ಕೊಠಡಿಗೆ ಅಗತ್ಯ ಪೀಠೋಪಕರಣಗಳನ್ನು ಸರಬರಾಜು ಮಾಡುವ ಸಂಬಂಧ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಅಗತ್ಯವಿರುವ ಸಾಮಗ್ರಿಗಳ ಸಂರಚನೆ ವಿವರಗಳು ಈ ಕೆಳಕಂಡಂತಿರುತ್ತವೆ.

| Sl.no | Particulars | Quantity | Amount |
|---|---|---|---|
| 1 | 3 seat fixed Iron/Steel Chair of very good gauge | 04 | |
| 2 | Iron/Steel Single Cot of Very good gauge | 01 | |
| 3 | Steel Wheel Chair | 01 | |

ಷರತ್ತುಗಳು:

1. ಲಕೋಟೆಯ ಮೇಲೆ **"ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ಮಹಿಳಾ ವಿಶ್ರಾಂತಿ ಕೊಠಡಿಗೆ ಅಗತ್ಯ ಪೀಠೋಪಕರಣಗಳನ್ನು ಸರಬರಾಜು ಮಾಡುವ ಕುರಿತು"** ಎಂದು ನಮೂದಿಸತಕ್ಕದ್ದು.
2. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 30 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.
3. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
4. ಸರಬರಾಜು ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
5. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.
6. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:27.03.2020 ಅಪರಾಹ್ನ 1–30.**
7. ದರಪಟ್ಟಿಯನ್ನು **ದಿನಾಂಕ:27.03.2020 ರಂದು ಅಪರಾಹ್ನ 2.30ಕ್ಕೆ ತೆರೆಯಲಾಗುವುದು.**
8. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು–572 103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರಿಯಾಗುವುದಿಲ್ಲ.
9. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10. ತಮ್ಮ ದರಪಟ್ಟಿಯಲ್ಲಿ ಪ್ರತಿ ಸಾಮಗ್ರಿವಾರು ದರಗಳನ್ನು ನಮೂದಿಸುವುದು.(ಎಲ್ಲಾ ತೆರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)
11. ಈ ದರಪಟ್ಟಿಯು ರೂಪಾಯಿ ಒಂದು ಲಕ್ಷಕ್ಕೆ ಮಿತಿಗೊಳಪಟ್ಟಿರುತ್ತದೆ ಮತ್ತು ಅಗತ್ಯವಿರುವ ಪ್ರಮಾಣಗಳನ್ನು ಸರಬರಾಜು ಆದೇಶದಲ್ಲಿ ನೀಡಲಾಗುವುದು.
12. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
13. ಪ್ರತಿ ಅರ್ಜಿದಾರರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
14. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
15. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

20/03

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ರಕ್ಷಣಾ ಪ್ರತಿ.